4 ವಿಶೇಷ ಹಲಸು ತಳಿಗಳ ನೋಂದಣಿ

ಕೆಳದಿ ಶಿವಪ್ಪನಾಯಕ ವಿವಿಯಿಂದ ವಿಶಿಷ್ಟ ಗುಣಗಳ ಹಲಸು ಸಂರಕ್ಷಣೆ

■ ವಿಕ ಸುದ್ದಿಲೋಕ ಶಿವಮೊಗ್ಗ

ಸಸ್ಯ ತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರದ ಮೂಲಕ ಜಿಲ್ಲೆಯಲ್ಲಿ ನಾಲ್ಕು ಪ್ರಭೇದದ ಹಲಸಿನ ತಳಿಯನ್ನು ನೋಂದಣಿ ಮಾಡಿಸಲಾಗಿದೆ. ರೈತರು ಹಲವು ವರ್ಷಗಳಿಂದ ಈ ತಳಿಯನ್ನು ಸಂರಕ್ಷಿಸಿ ಬೆಳೆಸುತ್ತಿದ್ದರು. ಇದರಲ್ಲಿ ವಿಶೇಷ ಗುಣಗಳಿವೆ ಎಂದು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಬಿ.ಎಂ.ದುಶ್ಯಂತ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಸ್ಯ ತಳಿಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರದ ಶಿವಮೊಗ್ಗ ಪ್ರಾದೇಶಿಕ ಮುಖ್ಯಸ್ಥ ಎ.ಕೆ.ಸಿಂಗ್ ಮಾತನಾಡಿ, ''ನಿರಂತರವಾಗಿ ಸಸ್ಯಗಳ ಸಂರಕ್ಷಣೆ ಮಾಡುವ ಕೆಲಸ ಮಾಡಲಾಗುತ್ತಿದೆ. ರೈತರು ಬೆಳೆದ ವಿಶಿಷ್ಟ ತಳಿಗಳನ್ನು ಸಂರಕ್ಷಿಸಿ ಅದನ್ನು ಇನ್ನಿತರರಿಗೂ ಪರಿಚಯಿಸಲಾಗುತ್ತಿದೆ. ರೈತರು ತಮ್ಮ ಬಳಿ ವಿಶಿಷ್ಟ ತಳಿಗಳಿದ್ದರೆ ನೋಂದಣಿ ಮಾಡಿಸಿಕೊಳ್ಳಬಹುದು. ಇದಕ್ಕೆ ಯಾವುದೇ ರೀತಿಯ ಶುಲ್ಕ ಇಲ್ಲ. ಆ ತಳಿಯನ್ನು ರೈತರ ಹೆಸರಿನಲ್ಲೇ ನೋಂದಾಯಿಸಲಾಗುತ್ತದೆ,'' ಎಂದು ಹೇಳಿದರು. ನಾಲ್ವರು ರೈತರಿಗೆ ನೋಂದಣಿ ಪ್ರಮಾಣ ಪತ್ರ ವಿತರಿಸಲಾಯಿತು.

ಯಾವ ಹಲಸುಗಳ ನೋಂದಣಿ?



■ **ಹಳದಿ ರುದ್ರಾಕ್ಷಿ**

ಹೊಸನಗರ ತಾಲೂಕಿನ ಬರುವೆ ಗ್ರಾಮದ ಅನಂತಮೂರ್ತಿ ಜವಳಿ ಅವರು ಹಳದಿ ರುದ್ರಾಕ್ಷಿ ತಳಿಯನ್ನು ಸಂರಕ್ಷಿಸಿದ್ದಾರೆ. ಇದು ಮಳೆಗಾಲದಲ್ಲೂ ಹೆಚ್ಚಿನ ನೀರಿನಾಂಶ ಹೊಂದಿರುವುದಿಲ್ಲ. 1.5ರಿಂದ 2 ಕೆಜಿ ಚಿಕ್ಕ ಗಾತ್ರದ್ದಾಗಿರುತ್ತದೆ. ಪ್ರತಿ ಹಣ್ಣಿನಲ್ಲಿ 20 ತೊಳೆಗಳಿರುತ್ತವೆ. ಪ್ರತಿ ಮರದಿಂದ ವರ್ಷಕ್ಕೆ 300 ಹಣ್ಣು ಪಡೆಯಬಹುದು. ಎಕರೆಗೆ 190 ಕ್ವಿಂಟಾಲ್ ಇಳುವರಿ ಬರುತ್ತದೆ. ತೊಳೆ ಹೆಚ್ಚು ಸಿಹಿಯಿಂದ ಕೂಡಿದ್ದು (ಟಿಎಸ್‌ಎಸ್ ಶೇ.28) ಶೇ.70ರಷ್ಟು ತೊಳೆಗಳನ್ನು ಪಡೆಯಬಹುದು.

■ **ಆರೆಂಜ್ ಹಲಸು**

ಸಾಗರ ತಾಲೂಕು ಆನಂದಪುರದ ಪ್ರಕಾಶ್ ನಾಯಕ್ ಆರೆಂಜ್ ಹಲಸಿನ ಹಣ್ಣು ಅಭಿವೃದ್ಧಿಪಡಿಸಿದ್ದಾರೆ. ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ 4 ವರ್ಷಕ್ಕೆ ಕೊಯ್ಲಿಗೆ ಸಿದ್ಧವಾಗುತ್ತದೆ. ಹಣ್ಣಿನ ತೊಳೆ ಕಿತ್ತಳೆ ಬಣ್ಣದಿಂದ ಆಕರ್ಷಿತವಾಗಿದೆ. ಪ್ರತಿ ಮರದಲ್ಲಿ ವರ್ಷಕ್ಕೆ 25ರಿಂದ 35 ಹಣ್ಣುಗಳನ್ನು ಪಡೆಯಬಹುದು. ಎಕರೆಗೆ 250 ಕ್ವಿಂಟಾಲ್ ಇಳುವರಿ ಪಡೆಯಬಹುದು. ಟಿಎಸ್‌ಎಸ್ ಶೇ.30ರಷ್ಟಿದೆ. ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ತೊಳೆ ಹೆಚ್ಚು ಸಿಹಿಯಿಂದ ಕೂಡಿರುತ್ತದೆ.

■ **ಕೆಂಪು ರುದ್ರಾಕ್ಷಿ**

ಹೊಸನಗರ ತಾಲೂಕು ವರಕೋಡು ಗ್ರಾಮದ ಎಸ್.ದೇವರಾಜ್ ಕೆಂಪು ರುದ್ರಾಕ್ಷಿ ತಳಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಪ್ರತಿ ಹಣ್ಣು 3 ಕೆಜಿ ತೂಕ ಹೊಂದಿರುತ್ತದೆ. ಹಣ್ಣುಗಳ ಸಿಪ್ಪೆಯು ಅತ್ಯಂತ ನಯವಾಗಿರುತ್ತದೆ. ತೊಳೆ ಕೆಂಪು ಬಣ್ಣದಿಂದ ಆಕರ್ಷಕವಾಗಿದ್ದು ಪ್ರತಿ ಹಣ್ಣಿಗೆ 15ರಿಂದ 16 ತೊಳೆಗಳಿರುತ್ತವೆ. ಪ್ರತಿ ಮರದಲ್ಲಿ ವರ್ಷಕ್ಕೆ 100ರಿಂದ 125 ಹಣ್ಣುಗಳನ್ನು ಪಡೆಯಬಹುದು. ಎಕರೆಗೆ 120 ಕ್ವಿಂಟಾಲ್ ಇಳುವರಿ ಸಾಮರ್ಥ್ಯವಿದೆ. ತೊಳೆಗಳು ಹೆಚ್ಚು ಸಿಹಿ (ಟಿಎಸ್‌ಎಸ್ ಶೇ.28) ಯಿಂದ ಕೂಡಿರುತ್ತವೆ.

■ **ರೆಡ್ ಹಲಸು**

ಸಾಗರ ತಾಲೂಕು ಮಂಕಳಲೆ ಗ್ರಾಮದ ಟಿ. ರಾಜೇಂದ್ರ ಈ ತಳಿ ಅಭಿವೃದ್ಧಿಪಡಿಸಿದ್ದಾರೆ. ಹಣ್ಣುಗಳ ಗಾತ್ರ ದೊಡ್ಡದಾಗಿದ್ದು ಪ್ರತಿ ಹಣ್ಣು 10ರಿಂದ 15 ಕೆ.ಜಿ ತೂಕ ಹೊಂದಿರುತ್ತದೆ. ಹಣ್ಣಿನ ತೊಳೆ ಕೆಂಪು ಬಣ್ಣದಿಂದ ಕೂಡಿದ್ದು ಹೆಚ್ಚು ಸಿಹಿಯಿಂದ ಕೂಡಿರುತ್ತದೆ.

15-06-2024
V-karnataka Pg 06

For more information visit
University Library Website
Web - uasbagrilibindia.org
E-mail- librarian@uasbangalore.edu.in

15-06-2024
V-karnataka Pg 06

ತೊಗರಿ ಬೆಳೆ ಪ್ರದೇಶ ವಿಸ್ತರಣೆಗೆ ಯೋಜನೆ | ಮುಂಗಾರಿನಲ್ಲಿ 12 ಲಕ್ಷ ಟನ್ ಉತ್ಪಾದನೆ ನಿರೀಕ್ಷೆ

16 ಲಕ್ಷ ಹೆಕ್ಟೇರ್ ತೊಗರಿ ಬೆಳೆಗೆ ಕರ್ನಾಟಕದ ಗುರಿ

■ **ಬಸವರಾಜ ಕೆ.ಜಿ.** ದಾವಣಗೆರೆ
basava.darshu@gmail.com

ಕೆಜಿಗೆ 200 ರೂ. ತಲುಪಿದ ತೊಗರಿ ಬೇಳೆ ಬೆಲೆ ನಿಯಂತ್ರಣಕ್ಕೆ ಕೃಷಿ ಇಲಾಖೆ ಮುಂದಾಗಿದೆ. ರಾಜ್ಯದಲ್ಲಿ ತೊಗರಿ ಸೇರಿದ್ದಿದ್ದಳ ಧಾನ್ಯ ಬೆಳೆಯುವ ಪ್ರದೇಶ ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ ಈ ಬಾರಿ ತೊಗರಿ ಬಿತ್ತನೆ ಪ್ರದೇಶದ ವಿಸ್ತರಿಸಲು ಇಲಾಖೆ ಯೋಜನೆ ರೂಪಿಸಿದೆ.



ರಾಜ್ಯದ ದಕ್ಷಿಣದ ಜಿಲ್ಲೆಗಳಲ್ಲಿ ಆಹಾರ ಧಾನ್ಯಗಳ ಭೂಮಿಯನ್ನು ಆಡಕೆ ಆವರಿಸಿದೆ. ಹೊಸ ಅಡಕೆ ತೋಟಗಳಲ್ಲಿ ಅಂತರ ಬೆಳೆಯಾಗಿ ತೊಗರಿ ಬೆಳೆಯಲು ಅವಕಾಶವಿದ್ದು ರೈತರ ಮನವೊಲಿಸಲಾಗುತ್ತಿದೆ. ಎಲ್ಲ ಜಿಲ್ಲೆಗಳಲ್ಲೂ ಆಕ್ಕಡಿ ಬೆಳೆಯಾಗಿ ತೊಗರಿ ಪ್ರಯೋಗವನ್ನು ಮತ್ತಷ್ಟು ವಿಸ್ತರಿಸಲು ಸೂಚಿಸಲಾಗಿದೆ.
-ಜೆ.ಟಿ.ಪುತ್ರ ಕೃಷಿ ಇಲಾಖೆ ನಿರ್ದೇಶಕ

ಆಹಾರ ಧಾನ್ಯ ಬಿತ್ತನೆ ಗುರಿ

ಬೆಳೆ	ಗುರಿ (ಹೆಕ್ಟೇರ್)
ತೊಗರಿ	15 ಲಕ್ಷ
ಮೆಕ್ಕೆಜೋಳ	15.40 ಲಕ್ಷ
ಭತ್ತ	10 ಲಕ್ಷ
ರಾಗಿ	7.30 ಲಕ್ಷ
ಹೆಸರು	3.99 ಲಕ್ಷ

ಆಕ್ಕಡಿ-ಅಂತರ ಬೆಳೆ ಪ್ರಯೋಗ

ಮಧ್ಯ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗದಲ್ಲಿ ಮೆಕ್ಕೆಜೋಳ, ಉಂಡದ ಜೋಳ, ಸಿರಿ ಧಾನ್ಯಗಳ ನಡುವೆ ಆಕ್ಕಡಿ (ಅಂತರ) ಬೆಳೆಯಾಗಿ ತೊಗರಿ ಬೆಳೆಯುವ ಪ್ರಯೋಗ ಜಾರಿಯಲ್ಲಿದೆ. ಆ ಪ್ರಯತ್ನವನ್ನು ಮತ್ತಷ್ಟು ಹೆಚ್ಚಿಸಿ, ಆಡಕೆ, ಅರಿಶಿಣ ಮತ್ತಿತರ ವಾಣಿಜ್ಯ ಬೆಳೆಗಳ ನಡುವೆ ಅಂತರ ಬೆಳೆಯಾಗಿ ತೊಗರಿ ಪರಿಚಯಿಸಲಾಗುತ್ತಿದೆ.

ಕಳೆದ ವರ್ಷ ಬರಗಾಲ ಆವರಿಸಿದ ಹಿನ್ನೆಲೆ ರಾಜ್ಯದಲ್ಲಿ ತೊಗರಿ ಉತ್ಪಾದನೆ ಶೇ.90ರಷ್ಟು ಕುಸಿದಿತ್ತು. ಇನ್ನೊಂದೆಡೆ ತೊಗರಿ ಬೆಳೆ ಪ್ರದೇಶವನ್ನು ಸೋಯಾ, ಆಡಕೆ ಮತ್ತು ಇತರ ವಾಣಿಜ್ಯ ಬೆಳೆಗಳು ಆವರಿಸುತ್ತಿರುವ ಕಾರಣ ಇತ್ತೀಚೆಗೆ ಬೆಳೆ ವ್ಯಾಪ್ತಿ ಕೂಡ ಕಡಿಮೆಯಾಗಿದೆ. 4 ವರ್ಷಗಳ ಹಿಂದೆ ದೇಶದ ಒಟ್ಟಾರೆ ತೊಗರಿ ಉತ್ಪಾದನೆಗೆ ಶೇ.30ರಷ್ಟು ಕೊಡುಗೆ ನೀಡುತ್ತಿದ್ದ ಕರ್ನಾಟಕ, ವರ್ಷದಿಂದ ವರ್ಷಕ್ಕೆ ಉತ್ಪಾದನೆಯಲ್ಲಿನ ಹಿಡಿತ ಸಡಿಲಿಕೆ ಆಗುತ್ತಿದೆ. ಪ್ರಸ್ತುತ ರಾಜ್ಯದ ಕೊಡುಗೆ ಶೇ.25ಕ್ಕೆ ಬಂದು ನಿಂತಿದೆ.

16 ಲಕ್ಷ ಹೆಕ್ಟೇರ್ ಗುರಿ: ಕರ್ನಾಟಕದಲ್ಲಿ ಈ ಬಾರಿ 16 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ತೊಗರಿ ಬೆಳೆಯಲು ಗುರಿ ನಿಗದಿಪಡಿಸಲಾಗಿದೆ. ಇದರೊಂದಿಗೆ ಹೆಚ್ಚು ತೊಗರಿ ಬೆಳೆಯುವ ಕಲಬುರಗಿ, ಬೀದರ್, ವಿಜಯಪುರ ಜಿಲ್ಲೆಗಳ ಆಯ್ದ ತಾಲೂಕುಗಳಲ್ಲಿ ಪ್ರಾತ್ಯಕ್ಷಿಕೆ ನೀಡಿ ತೊಗರಿ ಬೆಳೆಯುವಂತೆ ಕೃಷಿ ಇಲಾಖೆ ರೈತರ ಮನವೊಲಿಸುತ್ತಿದೆ.

ತಳಿಗಳ ಪರಿಚಯ: ಹೆಚ್ಚು ಇಳುವರಿ ಪಡೆಯುವ ನಿಟ್ಟಿನಲ್ಲಿ ರೈತರಿಗೆ ಹೊಸ ತೊಗರಿ ತಳಿಗಳನ್ನು ಪರಿಚಯಿಸಲಾಗಿದೆ. ಕಲಬುರಗಿಯಲ್ಲಿ ಜಿಆರ್‌ಜಿ-811, ಜಿಆರ್‌ಜಿ-152, ಟಿಎಸ್-3ಆರ್ ಮತ್ತು ಬಿಎಸ್‌ಎಂಆರ್-736 ತಳಿಗಳು ಚಾಲ್ತಿಯಲ್ಲಿವೆ. ಈ ಪೈಕಿ ಬಿಎಸ್ ಎಂಆರ್-736 ತಳಿ ಬಿತ್ತನೆ ಮಾಡಿದ ರೈತರು ಎಕರೆಗೆ 12 ಕ್ವಿಂಟಾಲ್ ಇಳುವರಿ ಪಡೆದಿದ್ದಾರೆ. ಹೀಗಾಗಿ ಇಂತಹ ತಳಿಗಳನ್ನು ಹೆಚ್ಚು ಪ್ರಚುರ ಪಡಿಸಲಾಗುತ್ತಿದೆ.

M&M eyes fivefold growth in farm machinery business

The Hindu Bureau
MUMBAI



Mahindra & Mahindra Ltd. (M&M) is aiming at scaling up its farm-machinery business fivefold in the next 5-7 years, the Mahindra Group said in a report.

The company would drive growth in the farm mechanisation market with a focus on new product introductions, capacity expansion and international growth.

In financial services, Mahindra Finance has been positioned as a strong financial-services platform for India, with a focus on diversification, technology, and data leadership.

The company aims at improving return on assets to more than 2.5% and maintain a market share of about 12% in the wheels segment, the Group said in the report.

Tech Mahindra, on the path of turnaround, is targeting a 500-basis-point margin expansion through growth, deep-tech capabilities and synergies from its portfolio companies.

15-06-2024
Hindu Pg 12

Surge in cultivation of profitable green gram crop

Green gram, from Page 1

The agriculture department projects green gram will be cultivated on 1.25 lakh hectares in Gadag and 67,150 hectares in Dharwad.

With the distribution of seeds and sowing, the state appears on track to meet the goal. From 2016 to 2023, the actual sowing area exceeded the target on the majority of occasions.

According to agrometeorologist R H Patil, being a leguminous plant, green gram makes the soil fertile, and unlike maize or chilli, allows for the early sowing of the rabi crop.

"Green gram plants survive adversities except waterlogging. The fertiliser requirement is less and it is disease-resistant. Thus, the production cost is low and mechanised harvesting facility is possoble, making it less labour-intensive. Hence, it is a relatively assured crop in rain-fed areas. It is a good crop for areas having 400 mm to 800 mm annual rainfall," Patil added.

The agriculture department has a target of cultivating green gram on 3.99 lakh hectares of land in the state. It expects 1.49 lakh tonnes of production, with an average yield of 380 to 400 kg per hectare. Interestingly, the average yield in the state is highest in the Dharwad district, with an average of 544 kg per hectare.

15-06-2024
Dec Hrd Pg 06

15-06-2024
Ptajavani Pg 08

ಔಷಧಿಸಸ್ಯ ವೈವಿಧ್ಯದ ನಾಶ ಆಯುರ್ವೇದವನ್ನು ಅಪಾಯಕ್ಕೆ ನೂಕುತ್ತಿದೆ

ಗಿಡಮೂಲಿಕೆ ಕ್ಷೇತ್ರಕ್ಕೆ ಬೇಕು ಮದ್ದು!



ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಭಾರತೀಯ ವೈದ್ಯಕೀಯ ಪದ್ಧತಿಗಳು ಹಿಂದಿನ ಹತ್ತು ವರ್ಷಗಳಲ್ಲಿ ಸಾಗಿಬಂದ ಸಾಧನೆಯ ಪಥವನ್ನು ವರ್ಣಿಸುವ ಸಮಗ್ರ ವರದಿಯೊಂದನ್ನು ಕೇಂದ್ರ ಆಯುಷ್ ಇಲಾಖೆ ಇತ್ತೀಚೆಗೆ ಪ್ರಕಟಿಸಿದೆ. 2014ರಲ್ಲಿ ಪ್ರತ್ಯೇಕ ಆಯುಷ್ ಸಚಿವಾಲಯವೇ ಅಸ್ತಿತ್ವಕ್ಕೆ ಬಂದ ನಂತರ, ಯೋಗ ಹಾಗೂ ಆಯುರ್ವೇದವು ದೇಶ- ವಿದೇಶಗಳಲ್ಲಿ ಹೇಗೆ ಆರೋಗ್ಯ ಕ್ಷೇತ್ರದ ಮೇಲ್‌ಸ್ತರಕ್ಕೆ ದಾಪುಗಾಲು ಹಾಕುತ್ತಿವೆ ಎಂಬ ವಿವರ ಅದರಲ್ಲಿದೆ.

ಆಯುರ್ವೇದವಂತೂ ಏಷ್ಯಾ, ಪೂರ್ವ ಯುರೋಪ್, ಗಲ್ಫ್ ಪ್ರದೇಶದ ಅನೇಕ ರಾಷ್ಟ್ರಗಳಲ್ಲಿ ಅಧಿಕೃತ ವೈದ್ಯಕೀಯ ಪದ್ಧತಿಯಾಗಿ ಮನ್ನಣೆ ಪಡೆದಿದೆ. ಅಲ್ಲೆಲ್ಲ ಆಯುರ್ವೇದದ ಶಿಕ್ಷಣ, ಸಂಶೋಧನೆ, ವೈದ್ಯಕೀಯ ವೃತ್ತಿ ಹಾಗೂ ಆಯುರ್ವೇದ ಔಷಧಿಗಳಿಗೆ ಆದ್ಯತೆ ಸಿಗುತ್ತಿದೆ. ಆಯುರ್ವೇದ ಔಷಧ ಮಾರುಕಟ್ಟೆಯು ಜಾಗತಿಕವಾಗಿ ಇದೀಗ 10 ಬಿಲಿಯನ್ ಡಾಲರ್ (₹ 83,550 ಕೋಟಿ) ದಾಟಿದೆ. ಅದೀಗ ವಾರ್ಷಿಕ ಶೇ 16ಕ್ಕೂ ಹೆಚ್ಚು ವೇಗದಲ್ಲಿ ಬೆಳೆಯುತ್ತಿದ್ದು, ಇನ್ನು ಐದು ವರ್ಷಗಳಲ್ಲಿ 24 ಬಿಲಿಯನ್ ಡಾಲರ್ (ಸುಮಾರು ₹ 2 ಲಕ್ಷ ಕೋಟಿ) ದಾಟಲಿದೆ ಎಂದು ಉದ್ಯಮಕ್ಷೇತ್ರ ಅಂದಾಜಿಸಿದೆ!

ರಾಷ್ಟ್ರೀಯ ಆದಾಯ ಹಾಗೂ ಉದ್ಯಮದ ವಿಸ್ತರಣೆ ದೃಷ್ಟಿಕೋನದಿಂದ ಇದು ಗಮನಾರ್ಹ ಬೆಳವಣಿಗೆಯೇ ಸರಿ. ಜಾಗತಿಕವಾಗಿ ಈಗ ಆಯುರ್ವೇದದ ಸುವರ್ಣಕಾಲ. ಕೆಲವೇ ದಶಕಗಳ ಮೊದಲು ಭಾರತಕ್ಕೆ ಸೀಮಿತವಾಗಿದ್ದ ದೇಸಿ ಚಿಕಿತ್ಸಾ ಕ್ರಮವೊಂದು, ಇಂದು ಅಲೋಪಥಿಗೆ ಪೈಪೋಟಿ ನೀಡುವಂತೆ ಜಗತ್ತಿನಾದ್ಯಂತ ಪಸರಿಸುತ್ತಿರುವುದು ಮಹತ್ವದ ಸಂಗತಿಯೇ ಹೌದು. ಆದರೆ, ಈ ಬೆಳವಣಿಗೆ ನಿಜಕ್ಕೂ ಆರೋಗ್ಯಕರವಾಗಿ ಇದೆಯೇ? ಆಯುರ್ವೇದದ ಜಾಗತೀಕರಣದ ಈ ಪ್ರವಾಹದಲ್ಲಿ, ಅದರ ಮೂಲತತ್ವಗಳು ಹಾಗೂ ಗಿಡಮೂಲಿಕಾ ಔಷಧಿಗಳು ತಮ್ಮ ನೈಜ ಅಸ್ತಿತ್ವ ಕಾಪಾಡಿಕೊಳ್ಳುತ್ತಿವೆಯೇ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾದ ಅಗತ್ಯವಿದೆ. ಇದು ಬರೀ ಆಯುರ್ವೇದ ಕ್ಷೇತ್ರದ ಹಿತಕ್ಕಾಗಿ ಮಾತ್ರವಲ್ಲ ಸಾರ್ವಜನಿಕ ಆರೋಗ್ಯದ ಸುರಕ್ಷೆಯ ದೃಷ್ಟಿಯಿಂದಲೂ ಬಹುಮುಖ್ಯ.

ಆಯುರ್ವೇದವು ಈಗ ಎದುರಿಸುತ್ತಿರುವ ಹಲವು ಗಂಭೀರ ಸವಾಲುಗಳಲ್ಲಿ, ಅದರ ಜೀವಾಳವಾಗಿರುವ ಗಿಡಮೂಲಿಕಾ ಕ್ಷೇತ್ರದ ಆಗುಹೋಗು ಪ್ರಮುಖವಾದದ್ದು. ನಿಸರ್ಗದಲ್ಲಿನ ಔಷಧಿಸಸ್ಯಗಳ ಸಂರಕ್ಷಣೆ, ಅವುಗಳ ಸಂವರ್ಧನೆ, ಸುಸ್ಥಿರ ಕೊಯಿಲು, ಔಷಧಿಗಳಲ್ಲಿ ಗುಣಮಟ್ಟದ ಮೂಲಿಕೆಗಳ ಬಳಕೆಯಂತಹ ಎಲ್ಲ ಆಯಾಮಗಳಲ್ಲೂ ಗಂಭೀರ ನ್ಯೂನತೆಗಳಿವೆ. ಗಿಡಮೂಲಿಕಾ ಕ್ಷೇತ್ರದ ಅಂಥ ನಾಲ್ಕು ಪ್ರಮುಖ ಆಯಾಮಗಳನ್ನು ಚರ್ಚಿಸುವ ಆಶಯ ಈ ಬರಹದ್ದು.


ಮೊದಲಿನದು, ನೈಸರ್ಗಿಕ ಔಷಧಿಸಸ್ಯ ವೈವಿಧ್ಯದ ಸಂರಕ್ಷಣೆ ಕುರಿತಾಗಿ. ನಮ್ಮ ನಾಡಿನ ಪರಿಸ್ಥಿತಿಯನ್ನೇ ಗಮನಿಸಿ. ರಾಜ್ಯದಲ್ಲಿ ಗುರುತಿಸಲಾಗಿರುವ ಸುಮಾರು 4,800ಕ್ಕೂ ಮಿಕ್ಕಿ ಹೂಬಿಡುವ ಸಸ್ಯಪ್ರಭೇದಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚಿನ ಪ್ರಭೇದಗಳನ್ನು ನಿಖರವಾಗಿ ಔಷಧಿಮೂಲಿಕೆಗಳೆಂದು ಗುರುತಿಸಲಾಗಿದೆ. ಅವುಗಳಲ್ಲಿ ಅರುನೂರಕ್ಕೂ ಹೆಚ್ಚು ಪ್ರಭೇದಗಳನ್ನು ವಿವಿಧ ಮೂಲಿಕಾ ಉದ್ಯಮಗಳು ವಾಣಿಜ್ಯಿಕವಾಗಿ ಬಳಸುತ್ತಿವೆಯೆಂದು ರಾಜ್ಯ ಗಿಡಮೂಲಿಕಾ ಪ್ರಾಧಿಕಾರ ಲೆಕ್ಕ ಹಾಕಿದೆ. ಆದರೆ, ಹಿಂದಿನ ಎರಡು ದಶಕಗಳಿಂದ ಈ ಸಸ್ಯಸಂಪತ್ತಿನ ನೈಸರ್ಗಿಕ ನೆಲೆಗಳೆಲ್ಲ ವೇಗವಾಗಿ ನಾಶವಾಗುತ್ತಿವೆ.

ಅರಣ್ಯ, ನದಿತೀರ, ಜೌಗುಪ್ರದೇಶ, ಗೋಮಾಳ ದಂತಹವುಗಳ ಒತ್ತುವರಿ, ಅವೈಜ್ಞಾನಿಕ ಮೂಲಿಕೆ ಸಂಗ್ರಹಣೆ ಹಾಗೂ ಕಳ್ಳಸಾಗಣೆಯಂತಹ ಕಾರಣಗಳಿಂದಾಗಿ ಸಸ್ಯ ಸಂಪನ್ಮೂಲ ಬತ್ತುತ್ತಿದೆ. ಎಂಬತ್ತಕ್ಕೂ ಹೆಚ್ಚು ಅಮೂಲ್ಯ ಪ್ರಭೇದಗಳು ಈಗಾಗಲೇ ವಿನಾಶ ದಂಚಿಗೆ ತಲುಪಿವೆ ಎಂದು ರಾಜ್ಯ ಜೀವವೈವಿಧ್ಯ ಮಂಡಳಿ ದಾಖಲಿಸಿಯೂ ಆಗಿದೆ. ಉದ್ಯಮಗಳು ಬಳಸುವ ಮೂಲಿಕೆಗಳ ಶೇ 85ಕ್ಕೂ ಹೆಚ್ಚಿನ ಪಾಲು ಇಂದಿಗೂ ಕಾಡಿನಿಂದಲೇ ಹರಿದುಬರುತ್ತಿರುವಾಗ, ಭವಿಷ್ಯದ ಪರಿಸ್ಥಿತಿ ಏನಾದೀತು?

ಎರಡನೆಯದು, ಈ ಸಸ್ಯವೈವಿಧ್ಯದ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಕ್ಕೆ ಸಂಬಂಧಿಸಿದ್ದು. ಈ ಕುರಿತು ಈಗಷ್ಟೇ ಸಂಶೋಧನಾ ಮಾಹಿತಿಗಳು ಲಭ್ಯವಾಗುತ್ತಿವೆ. ವೇಗವಾಗಿ ಏರುತ್ತಿರುವ ಸರಾಸರಿ ತಾಪಮಾನ, ಗಾಳಿಯ ತೇವಾಂಶದಲ್ಲಿ ವ್ಯತ್ಯಯ, ಅಕಾಲಿಕ ಮಳೆ, ಬದಲಾಗುತ್ತಿರುವ ಮಣ್ಣಿನ ರಾಸಾಯನಿಕ ಸಂರಚನೆಯಂತಹ ಅಂಶಗಳೆಲ್ಲ ತೀರಾ ವ್ಯತಿರಿಕ್ತ ಪರಿಣಾಮ ಉಂಟುಮಾಡುತ್ತಿರುವುದನ್ನು ನೆಲ್ಲಿ, ಅಣಲೆ, ಶಿವಣೆಯಂಥ ವ್ಯಾಪಕ ಬಳಕೆಯ ಪ್ರಭೇದಗಳಲ್ಲಿನ ಸಂಶೋಧನೆಗಳು ದಾಖಲಿಸಿವೆ.

ಗಿಡವೊಂದು ಔಷಧಿಯಾಗಿ ವರ್ತಿಸುವಲ್ಲಿ ಹಲವಾರು ಅಂಶಗಳ ಸಂಕೀರ್ಣ ಪ್ರಭಾವವಿರುತ್ತದೆ. ಅದರ ಬೀಜ ಪ್ರಸರಣದ ಪರಿ, ಬೆಳವಣಿಗೆಯ ವೇಗ, ಹೂಬಿಡುವ ಕಾಲ ಹಾಗೂ ಸಾಂದ್ರತೆ, ಮಿಡಿಕಚ್ಚುವ ಪ್ರಮಾಣ, ಸಸ್ಯಗಳಲ್ಲೇ ಅಂತರ್ಗತವಾಗಿದ್ದು ಅವುಗಳ ಜೀವರಾಸಾಯನಿಕಗಳ ಗುಣಧರ್ಮವನ್ನು ಬದಲಾಯಿಸುವ ಶಿಲೀಂಧ್ರದಂತಹ ಹತ್ತಾರು ಸಂಗತಿಗಳು ಔಷಧಿಯ ಗುಣಧರ್ಮವನ್ನು ನಿರ್ಧರಿಸುತ್ತವೆ. ಆದರೆ, ಹವಾಮಾನ ಬದಲಾವಣೆಯ ವಿಪರೀತ ಪರಿಣಾಮಗಳು ಮೂಲಿಕೆಗಳ ನೈಸರ್ಗಿಕ ಗುಣಧರ್ಮಗಳನ್ನೇ ಬದಲಾಯಿಸುತ್ತಿವೆ!

ಮೂರನೆಯದು, ಕೃಷಿಕ್ಷೇತ್ರದಿಂದ ಬರುವ



ಗಿಡಮೂಲಿಕೆಗಳ ಪರಿಸ್ಥಿತಿ. ಹೊಲದಲ್ಲಿ ಬೆಳೆಯುವ ಈ ಉತ್ಪನ್ನಗಳಾದರೂ ಯೋಗ್ಯವಾಗಿ ಇವೆಯೇ? ಅಲ್ಲೂ ಹತ್ತಾರು ಸಮಸ್ಯೆಗಳು. ಅರಿಸಿನ, ಲವಂಗ, ಲೋಳೆಸರ, ಅಮೃತಬಳ್ಳಿ, ಕಚೋರಾದಂತಹ ಹಲವಾರು ಉತ್ಪನ್ನಗಳು ಇಂದು ಕೃಷಿಯಿಂದಲೇ ಪೂರೈಕೆಯಾಗುತ್ತಿವೆ. ವಿವಿಧ ವೈರಸ್, ಬ್ಯಾಕ್ಟೀರಿಯ, ಶಿಲೀಂಧ್ರ, ಕೀಟಗಳು ಅವನ್ನು ಬಾಧಿಸುವುದರಿಂದ, ಅವು ಸ್ರವಿಸುವ ವಿಷಕಾರಕ ರಾಸಾಯನಿಕಗಳು ಗಿಡಮೂಲಿಕೆಗಳ ಭಾಗಗಳಲ್ಲೇ ಉಳಿದುಬಿಡುತ್ತವೆ. ಇತ್ತೀಚಿನ ದಶಕಗಳಲ್ಲಿ ಅವುಗಳ ಪ್ರಮಾಣ ನಿಗದಿತ ಪ್ರಮಾಣಕ್ಕಿಂತ ಗಮನಾರ್ಹವಾಗಿ ಹೆಚ್ಚುತ್ತಿದೆ.

ಇನ್ನು, ಈ ಬಗೆಯ ಸೂಕ್ಷ್ಮಾಣುಜೀವಿಗಳು ಅಥವಾ ರೋಗಕಾರಕ ಕೀಟಗಳನ್ನು ಓಡಿಸಲು ರೈತರು ಅಪಾರ ಪ್ರಮಾಣದಲ್ಲಿ ಕ್ರಿಮಿನಾಶಕಗಳನ್ನು ಸಿಂಪಡಿಸುತ್ತಿದ್ದಾರೆ. ಹೀಗಾಗಿ, ಮಾರುಕಟ್ಟೆಗೆ ತಲುಪುವ ಅಶ್ವಗಂಧ, ಕಿರಾತಕಡ್ಡಿ, ಕಾಮಕಸ್ತೂರಿ, ಅರಿಸಿನ, ಶುಂಠಿಯಂತಹವುಗಳಲ್ಲಿ ಅಪಾಯಕಾರಿ ಮಟ್ಟದಲ್ಲಿ ಮೋನೋಕ್ರೋಟೊಫಾಸ್, ಕ್ಲೋರೊಪೈರಿಫಾಸ್, ಎಂಡೊಸಲ್ಫಾನ್ ನಂಥ ವಿಷಕಾರಿ ರಾಸಾಯನಿಕಗಳ ಶೇಷಾಂಶ ಕಂಡುಬರುತ್ತಿದೆ! ಹೊಲದಿಂದ ಬರುವಾಗಲೇ ಮೂಲಿಕೆಗಳು ವಿಷವನ್ನು ಹೊತ್ತು ತಂದರೆ, ಅವನ್ನು ಆಧರಿಸಿದ ಆಯುರ್ವೇದ ಔಷಧಿಗಳ ಗುಣಮಟ್ಟ ಏನಾದೀತು?

ಅಂತಿಮವಾಗಿ, ಗಿಡಮೂಲಿಕೆಗಳನ್ನು ಕಚ್ಚಾವಸ್ತುವಾಗಿ ಬಳಸುವ ವೈವಿಧ್ಯಮಯ ಆಧುನಿಕ ಉದ್ಯಮಗಳ ಕುರಿತು. ಆಯುರ್ವೇದ ಔಷಧಿಗಳು, ಏಕಸ್ಯದ ಸಾರ, ಗಿಡಮೂಲಿಕೆಗಳ ಚೂರ್ಣದಂತಹ ನೂರಾರು ಬಗೆಯ ಉತ್ಪನ್ನಗಳನ್ನು ಅವು ತಯಾರಿಸಿ ಮಾರುತ್ತಿವೆ. ಆದರೆ, ಹಲವು ಉದ್ಯಮಗಳು ತಾವು ಬಳಸುವ ಸಸ್ಯಪ್ರಭೇದಗಳು ಹಾಗೂ ಅವುಗಳ ಪ್ರಮಾಣದ ಕುರಿತು ನೈಜ ಮಾಹಿತಿಯನ್ನು ಸರ್ಕಾರಕ್ಕೆ ಬಿಟ್ಟುಕೊಡುತ್ತಿಲ್ಲ. ಹೀಗಾಗಿ, ಯಾವೆಲ್ಲ ಪ್ರಭೇದಗಳು ಯಾವ ವ್ಯಾಪಾರಿ ಸರಪಣಿಗಳ ಮೂಲಕ ಉದ್ಯಮಗಳನ್ನು ಸೇರಿ, ಅವುಗಳ ಉತ್ಪನ್ನಗಳಾಗಿ ಮಾರುಕಟ್ಟೆ ತಲುಪುತ್ತಿವೆ ಎಂಬ ಸಂಪೂರ್ಣ ಚಿತ್ರಣವೇ ದೊರಕುತ್ತಿಲ್ಲ.

ಕಾಡು ಅಥವಾ ಕೃಷಿ- ಯಾವುದೇ ಮೂಲವಿದ್ದರೂ, ಉದ್ಯಮಗಳು ಅವನ್ನು ಅಲ್ಪವೆಚ್ಚದಲ್ಲಿಯೇ ದೊರಕಿಸಿಕೊಳ್ಳುತ್ತಿವೆ. ಗಿಡಮೂಲಿಕೆಗಳ ಸಂರಕ್ಷಣೆ ಹಾಗೂ ಸಂವರ್ಧನೆಯ ಜವಾಬ್ದಾರಿಯಿಂದ ಮಾತ್ರ ಸದಾ ನುಣುಚಿಕೊಳ್ಳುತ್ತಿವೆ!

ಇನ್ನು, ಆಯುರ್ವೇದದ ಹೆಸರಿನಲ್ಲಿ ಉದ್ಯಮಗಳು ಮಾರಾಟ ಮಾಡುತ್ತಿರುವ ಹಲವು ಔಷಧಿಗಳ ಗುಣಮಟ್ಟದ ಕುರಿತೂ ಗಂಭೀರ ದೂರುಗಳಿವೆ. ಹಲವು ಉದ್ಯಮಗಳು ಶಾಸ್ತ್ರೀಯ ಔಷಧಿಗಳಿಗಿಂತ ಹೆಚ್ಚಾಗಿ ತಮ್ಮದೇ 'ಪೇಟೆಂಟ್ ಔಷಧಿ'ಗಳನ್ನು ಉತ್ಪಾದಿಸಿ ಮಾರುತ್ತಿವೆ. ಅಂಥ ಹೊಸ ಉತ್ಪನ್ನಗಳ ಕ್ಷಮತೆ ಕುರಿತು ವಿಶ್ವಾಸಾರ್ಹ ವೈಜ್ಞಾನಿಕ ಆಧಾರಗಳು ಇಲ್ಲದಿಯೂ ಬರೀ ಜಾಹೀರಾತಿನ ಬಲದಿಂದಲೇ ಗ್ರಾಹಕರನ್ನು ತಲುಪುತ್ತಿವೆ. ಆಯುರ್ವೇದ ತಜ್ಞರು ಹಾಗೂ ವೈದ್ಯರ ಹಂಗಿಲ್ಲದೆ, ಬರೀ ಮಾರುಕಟ್ಟೆ ಬಲದಿಂದ ಆಯುರ್ವೇದದ ಹೆಸರನ್ನು ಹಣವಾಗಿ ಪರಿವರ್ತಿಸುತ್ತಿರುವ ಉದ್ಯಮಲೋಕದ ಚಿತ್ರಣ ಇದು. ಇತ್ತ ಆಯುರ್ವೇದಕ್ಕೂ ವಂಚನೆ, ಅತ್ತ ಮುಗ್ಧ ರೋಗಿಗಳಿಗೂ ಮೋಸ!

ಆಯುರ್ವೇದದ ವಾಣಿಜ್ಯೀಕರಣದ ಓಟದಲ್ಲಿ, ಗಿಡಮೂಲಿಕಾ ಕ್ಷೇತ್ರದ ಗುಣಮಟ್ಟ ನಿಯಂತ್ರಣದ ಜವಾಬ್ದಾರಿಯನ್ನು ಸರ್ಕಾರ ಮರೆಯದಿರಲಿ.